**ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ..ದಂ. ನ್ಯಾಯಾಲಯ, ಬಳ್ಳಾರಿ.**

**ಸಿ.ಸಿ. 591/2022**

| | |
|---|---|
| *ಹೆಸರು* | ಶ್ರೀ. ನಾರಾಯಣ ಸ್ವಾಮಿ |
| *ತಂದೆಯ ಹೆಸರು* | ಶ್ರೀ. ಲೇಟ್ ಓಬಳಪ್ಪ |
| *ವಯಸ್ಸು* | 75 ವರ್ಷ |
| *ವೃತ್ತಿ* | ನಿವೃತ್ತ ನೌಕರ |
| *ವಿಳಾಸ* | ಅನಂತಪುರಂ , ಅಂದ್ರ ಪ್ರದೇಶ. |

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 02.09.2025**

ಸಾಕ್ಷಿಗೆ ಕನ್ನಡ ಭಾಷೆಯು ಪೂರ್ಣವಾಗಿ ಅರ್ಥವಾಗುವುದಿಲ್ಲ ಮತ್ತು ತೆಲುಗು ಭಾಷೆ ಬಲ್ಲವಳಾಗಿದ್ದರಿಂದ ಶ್ರೀ ವಿ ಜಿ ಪಿ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಲಾಗಿರುತ್ತದೆ. ಸದರಿ ಭಾಷಾಂತರಕಾರರು ಕನ್ನಡ ಮತ್ತು ತೆಲುಗು ಭಾಷೆಗಳನ್ನು ಬಲ್ಲವಂತರಾಗಿರುತ್ತಾರೆ. ಭಾಷಾಂತರಕಾರರಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು. ಅವರ ಮುಖಾಂತರ ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು .

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

1 ನ್ಯಾಯಾಲಯದಲ್ಲಿರುವ ಆಪಾದಿತ ನನ್ನ ಬಾಮೈದ . ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ಯಾವುದೇ ಹೇಳಿಕೆಯನ್ನು ತನಿಖಾಧಿಕಾರಿಗೆ ನಾನು ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

2 ಬಳ್ಳಾರಿ ನಗರದ ಪಾತ್ರ ಬೂದಿಹಾಳ ಕಾರ್ಕರ್ಲ ತೋಟದ ಹನುಮಾನ ನಗರದಲ್ಲಿನ ನಿವೇಶನ ಸಂಖ್ಯೆ 179, 180 ವಿಸ್ತೀರ್ಣ 60X40, ಒಟುನಿಟ 2400 ಚದುರಡಿಗಳ ಖಾಲಿ ನಿವೇಶನಗಳನ್ನು ಕಬಳಿಸುವ ಹಾಗೂ ಮೋಸ ಮಾಡುವ ಉದ್ದೇಶದಿಂದ ಅಪಾದಿತರು ಇಬ್ಬರು ಸುಳ್ಳು ವಂಶ ವೃಕ್ಷವನ್ನು ಹಾಗು ನಮೂನೆ 3 ನ್ನು ಪಡೆದುಕೊಂಡು ದಿಃ 15.07.2021 ರಂದು ನನ್ನ ಹೆಂಡತಿಯ ಹೆಸರಿಲ್ಲಿದ್ದ ದಾನ ಪತ್ರವನ್ನು ಕಾಣಿಸದೇ ಪಾಲು ವಿಭಾಗ ಪತ್ರವನ್ನು ಮಾಡಿಕೊಂಡು ನಿವೇಶನ ಸಂಖ್ಯೆ 179 ಮತುನಿತ 180 ನ್ನು ಇಬ್ಬರು ಹಂಚಿಕೆ ಮಾಡಿಕೊಂಡು ದಿಃ 31.07.2021 ರಂದು ವೇಸದಹರ ತಿಪ್ಪೆಸ್ವಾಮಿರವರಿಗೆ ತಲಾ 4,48,000/- ರೂ. ಗಳಿಗೆ ಮಾರಾಟ ಮಾಡಿ ಮೊಸ ಮಾಡಿರುತ್ತಾರೆಂದರೆ ಸರಿಯಲ್ಲ. ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನನ್ನ ಹೆಂಡತಿಗೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದರಿಂದ ಆಕೆ ದಿಃ 16.12.2020 ರಂದು ಮೃತ ಪಟ್ಟಿದ್ದು ಆ ಕುರಿತು ಅನಂತಪುರ ಟೌನ್ ಪೋಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ 525/2022 ರಂತೆ ಪ್ರಕರಣ ದಾಖಲಾಗಿರುತ್ತದೆ ಎಂದು, ಆಸ್ತಿಯ ಖರೀದಿಯ ವಿವರಗಳನ್ನು ನೀಡಿ ದಿಃ 23.12.2021 ರಂದು ತನಿಖಾತಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯುಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ.14 ಎಂದು ಗುರುತಿಸಲಾಯಿತು. ನಿಪಿ.14 ರಂತೆ ಪ್ರಕರಣದ ಸಂಪೂರ್ಣ ವಿವರದ ಹೇಳಿಕೆಯನ್ನು ನೀಡಿದ್ದರೂ ಸಂಬಂದಿಕರಾದ ಅಪಾದಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಆರೋಪಿತರ ಪರ ಮಾನ್ಯ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.</u>**

**<u>ಮರು ವಿಚಾರಣೆಃ</u> ಇಲ್ಲ ಎಂದು ನುಡಿದಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಸಾಕ್ಷಿಗೆ ಸಾಕ್ಷ್ಯದ ಭಾಗ ವಿವರಗಳನ್ನು ಭಾಷಾಂತರಕಾರರ ಮುಖಾಂತರ ಓದಿ ಹೇಳಲಾಗಿರುತ್ತದೆ. ಅವರು ಸರಿ ಇದೆ ಎಂದು ಒಪ್ಪಿಕೊಂಡಿರುತ್ತಾರೆ.

**ಓ ಹೇ ಕೇ ಸರಿ ಇದೆ.**

**1 ನೇ ಅಪರ ಪ್ರ.ದ.ನ್ಯಾ.ದಂ. ಬಳ್ಳಾರಿ.**

ಯತಾವಥಾತಗಿ ಭಾಷಂತರಿಸಿರುತ್ತೇನೆ.

**ಭಾಷಾಂತರಕಾರರು**